ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar (Evaluation), Central College Campus, Dr. B.R. Ambedkar Veedhi,
Bengaluru – 560 001. E-mail: registrarevlubcu@gmail.com, Ph.No.080-22295559

ಸಂಖ್ಯೆ: ಬೆಂ.ನ.ವಿ/ಪ.ವಿ/01/2023-24 ದಿನಾಂಕ: 30.08.2023

## ಸುತ್ತೋಲೆ

ಬೆಂಗಳೂರು ನಗರ ವಿಶ್ವವಿದ್ಯಾಲಯದ 2ನೇ ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳು ದಿನಾಂಕ 04.09.2023 ರಿಂದ ಆರಂಭವಾಗಲಿವೆ. ಪರೀಕ್ಷಾಶುಲ್ಕವನ್ನು ಪಾವತಿಸಲು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೊನೆಯ ದಿನಾಂಕದ ನಂತರವೂ ಅನಿವಾರ್ಯವಾಗಿ ಅನುಮತಿ ನೀಡುವಂತಹ ಪರಿಸ್ಥಿತಿ ಬಂದಿದೆ. ಇದರಿಂದಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಪರೀಕ್ಷಾ ಕೇಂದ್ರಗಳಿಗೆ ಒದಗಿಸುವ ಪ್ರಶ್ನೆಪತ್ರಿಕೆಗಳ ಸಂಖ್ಯೆಯಲ್ಲಿ ಏರುಪೇರಾಗುವ ಸಾಧ್ಯತೆ ಇರುತ್ತದೆ. ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಿರಲು ವಿಶ್ವವಿದ್ಯಾಲಯ ಮುನ್ನೆಚ್ಚರಿಕೆ ವಹಿಸಿದೆ. ಆದಾಗ್ಯೂ ಪ್ರಶ್ನೆಪತ್ರಿಕೆಗಳ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯಾದಲ್ಲಿ ತಕ್ಷಣ ಮೌಲ್ಯಮಾಪನ ಕುಲಸಚಿವರ ಗಮನಕ್ಕೆ ತಂದು ಈ ಕೆಳಕಂಡ ಕ್ರಮಕೈಗೊಳ್ಳುವುದು.

ಪರೀಕ್ಷಾ ವಿಷಯದಲ್ಲಿ ಗೌಪ್ಯತೆ ಕಾಪಾಡುವುದು ಅತ್ಯಗತ್ಯ. ಪ್ರಶ್ನೆಪತ್ರಿಕೆಗಳ ಸಂಖ್ಯೆಯಲಿ ಕಡಿಮೆ ಇದ್ದಲ್ಲಿ ಪರೀಕ್ಷಾ ಪ್ರಾರಂಭವಾಗುವ 05 ನಿಮಿಷ ಮೊದಲು ಗೌಪ್ಯತೆ ನಿಯಮವನ್ನು ಅನುಸರಿಸಿ ಎಷ್ಟು ಬೇಕೋ ಅಷ್ಟು ಮಾತ್ರ ಪ್ರಶ್ನೆಪತ್ರಿಕೆಗಳ ಛಾಯಾಪ್ರತಿಗಳನ್ನು ತೆಗೆದುಕೊಂಡು ಪರೀಕ್ಷಾ ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳಿಗೆ ಹರಡುವುದು.

ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಈ ಪ್ರಕ್ರಿಯೆ ಬಗ್ಗೆ ಸೂಕ್ತ ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕವಾಗಿ ಸಲ್ಲಿಸುವುದು.

ಕುಲಸಚಿವರು (ಮೌಲ್ಯಮಾಪನ)
ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

ಪ್ರತಿಗಳು:

1. ಎಲ್ಲಾ ಸಂಯೋಜಿತ ಕಾಲೇಜಿನ ಪ್ರಾಂಶುಪಾಲರುಗಳಿಗೆ,
2. ಕಛೇರಿ ಪ್ರತಿ